

# ಅನುಕರಣೆಯ ಅವಸ್ಥೆ

ವಿಶ್ವವಿಖ್ಯಾತ ವಿಜ್ಞಾನಿಗಳಾಗಿದ್ದ ಆಲ್ಬರ್ಟ್ ಐನ್‌ಸ್ಟೀನ್‌ರವರು ತಮ್ಮ ಸಾಪೇಕ್ಷವಾದದ ಸಂಶೋಧನೆಯ ಸಿದ್ಧಾಂತದಿಂದ ಪ್ರಸಿದ್ಧರಾಗಿದ್ದರು. ಅವರು ಹೋದ ಬೇರೆ ಬೇರೆ ಊರು ಮತ್ತು ಸಭೆ ಸಮಾರಂಭಗಳಲ್ಲಿ ತಮ್ಮ ಸಾಪೇಕ್ಷವಾದದ ಬಗ್ಗೆ ಹೇಳುತ್ತಿದ್ದರು. ಅವರು ಭಾಗವಹಿಸಿದ ಕಾರ್ಯಕ್ರಮಗಳನ್ನು ಕೇಳಿ ಕೇಳಿ ಅವರ ಕಾರಿನ ಚಾಲಕನಿಗೆ ಸಾಪೇಕ್ಷವಾದದ ವಿಚಾರಗಳು ಮನವರಿಕೆಯಾಗಿದ್ದವು.

ಅವನು ಒಂದು ದಿನ ಐನ್‌ಸ್ಟೀನ್‌ರವರಿಗೆ, 'ಸರ್, ನಿಮ್ಮ ಭಾಷಣ, ಉಪನ್ಯಾಸಗಳನ್ನು ಕೇಳಿ ನನಗೆ ನಿಮ್ಮಂತೆ ಭಾಷಣ ಮಾಡಲು ಮತ್ತು ತಮ್ಮ ಸಂಶೋಧನೆಯಾದ ಸಾಪೇಕ್ಷವಾದದ ಸಿದ್ಧಾಂತವನ್ನು ತಿಳಿಸಲು ಬರುತ್ತದೆ' ಎಂದನು.

ಆಗ ಆಲ್ಬರ್ಟ್ ಐನ್‌ಸ್ಟೀನ್‌ರವರು ನಸುನಗುತ್ತಾ, 'ಹಾಗೇ ಆಗಲಿ. ನಾಳೆ ದೂರದ ಊರಿನಲ್ಲಿ ನನ್ನ ಭಾಷಣವಿದೆ. ಅಲ್ಲಿಯ ಜನರಿಗೆ ನನ್ನ ಮುಖದ ಪರಿಚಯವಿಲ್ಲ. ನೀನು ನನ್ನ ಉಡುಪು ಧರಿಸಿ ಅಲ್ಲಿ ಭಾಷಣ ಮಾಡು. ನಾನು ನಿನ್ನ ಉಡುಪನ್ನು ಧರಿಸಿ ಕಾರನ್ನು ಚಲಾಯಿಸುತ್ತೇನೆ' ಎಂದರು.

ಅದಕ್ಕೆ ಚಾಲಕನು ಒಪ್ಪಿ ಮರುದಿನ ಐನ್‌ಸ್ಟೀನ್‌ರವರ ಉಡುಪು ಧರಿಸಿ ಕಾರ್ಯಕ್ರಮದ ಸ್ಥಳಕ್ಕೆ ಹೋದನು. ಕಾರು ಚಾಲಕನ ವೇಷ ಧರಿಸಿದ ಐನ್‌ಸ್ಟೀನ್‌ರವರು ಕಾರ್ಯಕ್ರಮದ ಸ್ಥಳದ ಹತ್ತಿರ ಕಾರನ್ನು ನಿಲ್ಲಿಸಿ ಅದರ ಒಳಗಡೆ ಕುಳಿತುಕೊಂಡರು.

ಅಲ್ಲಿಯ ಸಭೆಯ ಸಂಚಾಲಕರು ಐನ್‌ಸ್ಟೀನ್ ಉಡುಪು ಧರಿಸಿದ ಚಾಲಕನನ್ನು ವೇದಿಕೆಯ ಮೇಲೆ ಕೂರಿಸಿ ಅವರ ಗುಣಗಾನ ಮಾಡಿ ಕೊರಳಿಗೆ ಹೂಮಾಲೆ ಹಾಕಿದರು. ಆ ಚಾಲಕನು ಐನ್‌ಸ್ಟೀನ್‌ರವರಂತೆ ಸಾಪೇಕ್ಷವಾದದ ಬಗ್ಗೆ ತಾಸುಗಟ್ಟಲೆ ಭಾಷಣ ಮಾಡಿದನು. ಸಭಿಕರೆಲ್ಲಾ ಭಾಷಣವನ್ನು ಕೇಳಿ ಆನಂದದಿಂದ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕಾರು ಚಾಲಕ ತನಗೆ ದೊರೆತ ಮರ್ಯಾದೆ, ಗೌರವದ ಸ್ಥಾನಮಾನದ ಬಗ್ಗೆ ಅಂತರಂಗದಲ್ಲಿಯೇ ಅಭಿಮಾನಪಟ್ಟನು.

ಕಾರ್ಯಕ್ರಮ ಮುಗಿದ ಮೇಲೆ ಒಬ್ಬ ಪ್ರೊಫೆಸರ್ ಬಂದು 'ಸರ್, ನನಗೆ ಈ ಬೀಜ ಗಣಿತದ ಸೂತ್ರ ತಿಳಿಯದಾಗಿದೆ. ತಾವು ತಿಳಿಸಬೇಕು' ಎಂದು ವಿನಮ್ರತೆಯಿಂದ ಕೇಳಿಕೊಂಡರು.

ಈ ಮಾತುಗಳನ್ನು ಕೇಳಿ ಐನ್‌ಸ್ಟೀನ್‌ರವರ ಉಡುಪು ಧರಿಸಿದ್ದ ಕಾರು ಚಾಲಕನಿಗೆ ದಿಕ್ಕೇ ತೋಚದಂತಾಯಿತು. ಬರುವುದಿಲ್ಲವೆಂದು ಹೇಳಿದರೆ ಐನ್‌ಸ್ಟೀನ್‌ರವರ ಮರ್ಯಾದೆಗೆ, ಪ್ರಸಿದ್ಧಿಗೆ ಧಕ್ಕೆ ಬರುತ್ತದೆ. ಏನು ಮಾಡಬೇಕೆಂದು ಮನದೊಳಗೆ ಚಿಂತಿಸ ಹತ್ತಿದನು. ಆಗ ತಕ್ಷಣವೇ ಅವನು ಸಮಯ ಪ್ರಜ್ಞೆಯಿಂದ ಆ ಪ್ರೊಫೆಸರರಿಗೆ 'ಇದು ಸಣ್ಣ ಪ್ರಶ್ನೆ. ಈ ಪ್ರಶ್ನೆಗೆ ನಮ್ಮ ಕಾರಿನ ಚಾಲಕನನ್ನು ಕೇಳಿರಿ. ಉತ್ತರ ಕೊಡುತ್ತಾನೆ' ಎಂದನು.

ಆಗ ಆ ಪ್ರೊಫೆಸರ್ ಕಾರಿನ ಚಾಲಕನ ವೇಷದಲ್ಲಿದ್ದ ಐನ್‌ಸ್ಟೀನ್‌ರನ್ನು ಕೇಳಿದಾಗ ಅವರಿಂದ ಸರಿಯಾದ ಉತ್ತರ ದೊರಕಿತು. ಕಾರಿನ ನಿಜವಾದ ಚಾಲಕ, ಅನುಕರಣೆಯ ಅಡ್ಡಿ, ಆತಂಕ ದೊಡ್ಡವರ ಸಹವಾಸದಿಂದ ನಿವಾರಣೆಯಾಗುತ್ತದೆ ಎಂದು ಅರಿತುಕೊಂಡನು.

**(ಸಂಗ್ರಹ): ಬಸವರಾಜ ಹೂಗಾರ, ಹುನಗುಂದ**